ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 21st January 1970.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Allotment of Reserved seats in Private Medical colleges

2. **Sri S. H. PUTTARANGANATH** (Belur).—

Will the Minister for Health be pleased to state:—

(*a*) the number of seats earmarked for allotment by the Chief Minister, Health Minister and other Cabinet Ministers in Private Medical Colleges;

(*b*) the names and addresses of the students to whom such seats were allotted by them this year;

(*c*) the reasons for giving such seats to students coming from outside the States while there is a keen competition within the State for seats in Medical Colleges?

Sri Y. RAMAKRISHNA (Minister for Health).—

(*a*) Nil.

(*b*) Does not arise in view of reply to (*a*) above.

(*c*) Does not arise in view of reply to (*a*) above.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಸ್ವಾಮಿ (ಎ) ಪ್ರಶ್ನೆಗೆ ಉತ್ತರವಾಗಿ ನಿರ್ ಎಂದು ಹೇಳಿದ್ದೀರಿ. (ಬಿ) ಮತ್ತು (ಸಿ) ಗೆ ಒಂದೇ ಉತ್ತರ ಕೊಟ್ಟಿದ್ದೀರಿ. ತಮ್ಮ ರೆಕ್‌ಮೆಂಡೇಷನ್ ಮೇರೆ ಯಾವ ಯಾವ ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಮತ್ತು ಗೌರ್ನಮೆಂಟ್ ಮೆಡಿಕಲ್ ಕಾಲೇಜುಗಳಲ್ಲಿ ಎಷ್ಟು ಸೀಟುಗಳನ್ನು ಕೊಡುತ್ತಿದ್ದಾರೆ ಎಂದು ಹೇಳುವುದಕ್ಕೆ ಆಗುತ್ತದೆಯೇ?

† ವೈ. ರಾಮಕೃಷ್ಣ.—ಇದಕ್ಕೆ ಉತ್ತರದಲ್ಲಿ ಮೊದಲೇ ತಿಳಿಸಿದ್ದೇನೆ. ಮಂತ್ರಿಗಳಿಗೋಸ್ಕರ ಯಾವ ಸೀಟುಗಳನ್ನೂ ರಿಸರ್ವೇಷನ್ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ಹೆಡ್. ಪುಟ್ಟರಂಗನಾಥ.—ಯಾವ ಯಾವ ಕಾಲೇಜುಗಳಿಗೆ ತಾವು ಕಾಗದ ಬರೆದು ಕಳುಹಿಸಿದ್ದೀರೋ ಅಲ್ಲಿ ಸೀಟುಗಳನ್ನು ಕೊಡುತ್ತಾರೆ. ಇದರ ಬಗ್ಗೆ ವಿವರಗಳೇನಾದರೂ ಇದ್ದರೆ ಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ನಮಗೆ ತಿಳಿದಿರುವ ಹಾಗೆ ಮಂತ್ರಿಗಳೇ ಆಗಲಿ, ಶಾಸನ ಸಭಾ ಸದಸ್ಯರೇ ಆಗಲಿ ಯಾರು ಕಾಗದ ಬರೆದು ಕಳುಹಿಸಿದರೂ ಅದನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಫಾರ್‌ವಾರ್ಡ್ ಮಾಡುವುದು ಒಂದು ಅಫಿಷಿಯಲ್ ಪ್ರೊಸೀಜರ್ ಏನು ಇದೆಯೋ ಅದರಂತೆ ಕಳುಹಿಸುತ್ತೇವೆ. ಅಷ್ಟೇ ಹೊರತು ಇವರಿಗೆ ಸೀಟು ಕೂಡಿ ಎಂದು ಹೇಳಲು ಕಾನೂನು ಪ್ರಕಾರ ನಮಗೆ ಅಧಿಕಾರವಿಲ್ಲ. ಹಾಗೆ ಒತ್ತಾಯ ಮಾಡುವುದೂ ಇಲ್ಲ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಮೆಡಿಕಲ್ ಕಾಲೇಜುಗಳಲ್ಲಿ ಕೇಂದ್ರ ಸರ್ಕಾರದ ಕೋಟಾ ಮತ್ತು ರಾಜ್ಯ ಸರ್ಕಾರದ ಕೋಟಾ ಎನ್ನತಕ್ಕಂಥಾದ್ದು ಪ್ರತಿಕಾಲೇಜುಗಳಿಗೂ ಕೊಡುವುದಕ್ಕೆ ಇದೆಯೇ ? ಹಾಗಿದ್ದರೆ ಯಾವ ಯಾವ ಮೆಡಿಕಲ್ ಕಾಲೇಜುಗಳಿಗೆ ಎಷ್ಟೆಷ್ಟು ಇವೆ ? ಕೇಂದ್ರ ಸರ್ಕಾರದ ಮತ್ತು ಸ್ಟೇಟ್ ಗೌರ್ನಮೆಂಟಿನ ಸೀಟುಗಳನ್ನು ಭರ್ತಿ ಮಾಡಲು ಮಂತ್ರಿಗಳಿಗೆ ಅಧಿಕಾರ ಇದ್ದಿವೇ ?

ಶ್ರೀ ವೈ. ರಾಮಕೃಷ್ಣ.—ಖಾನಗಿ ಮೆಡಿಕಲ್ ಕಾಲೇಜುಗಳ ಬಗ್ಗೆ ಸರ್ಕಾರದ ಸೀಟು ಬೆಳಗಾಂಗೆ 12, ಧಾರವಾಡಗರಿಗೆ 15, ಮಣಿಪಾಲ್‌ಗೆ 12 ಮತ್ತು ಗುಲ್ಬರ್ಗಕ್ಕೆ 20 ಒಟ್ಟು 59 ಸೀಟುಗಳು ಇವೆ. ಅವುಗಳನ್ನು ಜನರಲ್ ಪೂಲ್‌ಗೆ ಸೇರಿಸಿಕೊಂಡು ಆಡ್ಮಿಷನ್ ಕಮಿಟಿಯವರು ಅದನ್ನು ತೀರ್ಮಾನಮಾಡುತ್ತಾರೆ. ಆದುದರಿಂದ ಸರ್ಕಾರದವರೇ ಆಗಲಿ, ಮಂತ್ರಿಗಳೇ ಆಗಲಿ ಆದರಲ್ಲಿ ಕೈ ಹಾಕುವುದಿಲ್ಲ, ಕೈ ಹಾಕುವುದಕ್ಕೆ ಸಾಧ್ಯವೂ ಇಲ್ಲ. ಮೆರಿಟ್ ಇಟ್ಟುಕೊಂಡು ಪಟ್ಟಿ ಮಾಡುತ್ತಾರೆಯೇ ಹೊರತು ಇದರಲ್ಲಿ ಸರ್ಕಾರದವರು ಕೈ ಹಾಕುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ಯಾವ ಆಧಾರದ ಮೇಲೆ ಪತ್ರಗಳನ್ನು ಕೊಡುತ್ತೀರಿ ? ಮೆರಿಟ್‌ಮೇಲೆ ಸೀಟುಗಳನ್ನು ಕೊಡುತ್ತೀರಾ ಅಥವಾ ತಮಗೆ ಬೇಕಾದವರಿಗೆ ಪತ್ರಗಳನ್ನು ಬರೆದು ಸೀಟುಗಳನ್ನು ಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅದನ್ನು ಮೊದಲೇ ಹೇಳಿದ್ದೇನೆ. ಯಾವ ಮಂತ್ರಿಗಳು ಬರೆದು ಕಳುಹಿಸಿದರೂ, ಶಾಸನಸಭಾ ಸದಸ್ಯರೇ ಬರೆದು ಕಳುಹಿಸಿದರೂ ಕಾನೂನು ಪ್ರಕಾರ ಅದನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಫಾರ್‌ವಾರ್ಡ್ ಮಾಡುತ್ತೇವೆ. ಅವರಿಗೆ ಸೀಟುಗಳನ್ನು ಕೊಡಬೇಕಾದ್ದು, ಬಿಡಬೇಕಾದ್ದು ಕಮಿಟಿಗೆ ಸೇರಿದ್ದು. ಅದರ ಬಗ್ಗೆ ನಾವು ಯಾರನ್ನೂ ಕಂಪೆಲ್ ಮಾಡುವುದಿಲ್ಲ ಮತ್ತು ನಾವು ಯಾವ ನಿರೀಕ್ಷಣೆಯನ್ನು ಕೂಡ ಇಟ್ಟುಕೊಳ್ಳುವುದಿಲ್ಲ.

Sri H. SIDDAVEERAPPA.—Under what Government rules are you forwarding letters that you have received from outsiders ? Is it or is it not a fact that some of the seats, apart from the merit pool seats that you have mentioned, especially in the college in Davangere have been earmarked for Ministers, Four for Health Minister, 4 for Chief Minister and 4 for others and for some other dignitaries like M.L.As.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಅದು ನಿಜವಲ್ಲ.

ಶ್ರೀ ಸಿದ್ಧಯ್ಯ ಕಾಶಿಮಠ.—ಸ್ವಾಮಿ, ಖಾನಗೀ ವೈದ್ಯ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವಾಗ ಹೆಚ್ಚಿಗೆ ಪಂತಿಗೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಇದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅದಕ್ಕೋಸ್ಕರವಾಗಿಯೇ ಈ ಖಾನಗೀ ಮೆಡಿಕಲ್ ಕಾಲೇಜುಗಳಿಗೆ ಒಂದು ಯೂನಿಫಾರಂ ರೂಲ್ಸ್‌ನ್ನು ಮಾಡಬೇಕೆಂದು ಇದ್ದೇವೆ. ಗವರ್ನಿಂಗ್ ಕೌನ್ಸಿಲ್ ಮಾಡಲು ಬೈಲಾಗಳನ್ನು ರೆಡಿ ಮಾಡಿದ್ದೇವೆ. ಗವರ್ನಿಂಗ್ ಕೌನ್ಸಿಲ್‌ನಲ್ಲಿ 7 ಜನ ಇರಬೇಕೆಂದು ಇದೆ. ಅದರಲ್ಲಿ ಒಬ್ಬ ಚೇರ್ಮನ್, 3 ಜನ ಸರ್ಕಾರದ ಪ್ರತಿನಿಧಿಗಳು, 3 ಜನ ಸಂಸ್ಥೆ ಪ್ರತಿನಿಧಿಗಳು

† Asterisks Indicates that remarks or speeches have not been revised by the member concerned.

ಹೀಗೆ ಒಟ್ಟು 7 ಜನ ಪ್ರತಿನಿಧಿಗಳು ಇರಬೇಕೆಂದು ಇದೆ. ಇದಕ್ಕೆ ಎರಡು ಕಾಲೇಜುಗಳವರು ಒಪ್ಪಿ ಕೊಂಡಿದ್ದಾರೆ ಇನ್ನೂ ಎರಡು ಕಾಲೇಜಿನವರಿಂದ ಉತ್ತರ ನಿರೀಕ್ಷಣೆ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ.—ಸ್ವಾಮಿ ಈ ಖಾಸಗೀ ಮೆಡಿಕಲ್ ಕಾಲೇಜು ಗಳಲ್ಲಿ ಡೋನೇಷನ್ ತೆಗೆದುಕೊಂಡು ಸೀಟುಗಳನ್ನು ಕೊಡುತ್ತಿದ್ದಾರೆ ಈ ಡೊನೇಷನ್ ಸೀಟು ಗಳಲ್ಲಿ ಪರಿಶಿಷ್ಟ ವರ್ಗಕ್ಕೆ ರಿಸರ್ವೇಷನ್ ಇದೆಯೇ ? ಈ ಪರಿಶಿಷ್ಟ ವರ್ಗದವರಿಂದ ಡೊನೇಷನ್ ತೆಗೆದು ಕೊಳ್ಳದೆ ಈ ರಿಸರ್ವೇಷನ್ ಭರ್ತಿ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೀರಾ ?

Mr. SPEAKER.—It is beyond the scope of the question and therefor the supplementary is disallowed.

ಶ್ರೀ ಹಂಪಿ ಶಿವಣ್ಣ.—ಸ್ವಾಮಿ ಈ ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವಾಗ ರಾಜಕೀಯ ಸಂಸ್ಥಾಪಕರಿಗೆ ಎಂದು 15 ಸೀಟುಗಳನ್ನು ಕಾದಿರಿಸಿದೆ. ಆದರೆ ಇದು ಏನಾಗಿದೆ ಎಂದರೆ 6 ವರ್ಷ ಶಿಕ್ಷೆ ಅನುಭವಿಸಿ ಇರುವಕ್ಕಂಥವರಿಗೆ ಎಂದು ಒಂದು ನಿಯಮ ಇಟ್ಟಿದ್ದಾರೆ. ಕೆಲವಾರು ವರ್ಷಗಳಿಂದ ಇದನ್ನು ಅನ್ಯಾಯದ ರೀತಿಯಲ್ಲಿ ಉಪಯೋಗಿಸುತ್ತಾ ಬಂದಿದ್ದಾರೆ. ಯಾರೋ ಒಬ್ಬ ಎಸೆಂಬ್ಲಿ ಮೆಂಬರೋ, ಎಂ. ಎಲ್. ಸಿ. ಮೆಂಬರೋ ರೆಕಮೆಂಡೇಷನ್ ಮಾಡಿದವ ರಿಗೆ ಶಿಕ್ಷೆಯನ್ನು ಅನುಭವಿಸದೇ ಇರುವವರಿಗೆ ಅವರಿಗೆ ಸೀಟುಗಳನ್ನು ಕೊಡಿತ್ತಿದ್ದಾರೆ. ಇದು ಅನ್ಯಾ ಯವಾಗುತ್ತಾ ಇದೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ವೈ ರಾಮಕೃಷ್ಣ.—ಅದು ನಿಜವಲ್ಲ, ಯಾರಾದರೂ ಆಗಲಿ ಜೈಲು ಸರ್ಟಿಫಿಕೇಟ್ ಪ್ರೊಡ್ಯೂಸ್ ಮಾಡಬೇಕು. ಪೊಲಿಟಿಕಲ್ ಸಫರರ್ಸ್ ಜೈಲ್ ಸರ್ಟಿಫಿಕೇಟನ್ನು ಪ್ರೊಡ್ಯೂಸ್ ಮಾಡ ಬೇಕು ಎನ್ನುವ ರೂಲನ್ನು ಅಡಕಮಾಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀಸ್ ಅಗಾಧ ವಾಗಿದೆ. ಇದರಿಂದ ಬಡವರು ಅಲ್ಲಿ ಸೇರುವುದಕ್ಕೆ ಅವಕಾಶ ಇಲ್ಲದೇ ಇರುವುದರಿಂದ ಸರ್ಕಾರದ ವರು ಈ ಖಾಸಗೀ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವುದರಿಂದ, ಸರ್ಕಾರದವರೇ ನೇರವಾಗಿ ಸೀಟುಗಳನ್ನು ಕೊಡುವುದಕ್ಕೆ ಆಗುತ್ತದೆಯೇ ?

Mr. SPEAKER.—That question is dissallowed as it is beyond the scope of the main question.

Sri C. K. RAJAIAH SHETTY.—Is the Government aware that apart from the regular donations, the members of the selection committees are also collecting unofficially additional donations that are unaccounted for ?

Mr. SPEAKER.—That question is dissallowed as it is beyond the scope of the main question.

ಶ್ರೀ ಎನ್. ಎ. ಚನ್ನೇಗೌಡ.—ಸರ್ಕಾರದ ಕೆಲವು ಸೀಟುಗಳನ್ನು ಮೆರಿಟ್‌ಪೂಲ್‌ಗೆ ಸೇರಿಸಿ, ಅವರಿಂದಲೂ ಕೂಡ ಮಂತಿಗೆ ಹಣವನ್ನು ವಸೂಲು ಮಾಡುತ್ತಿದ್ದಾರೆ. ಅದು ಗೊತ್ತಿದೆಯೋ ?

Mr. SPEAKER.—That is dissallowed as it is beyond the scope of the main question.

ಶ್ರೀ ಎಚ್. ಬಿ. ಜ್ವಾಲನಯ್ಯ.—ಪ್ರೈವೇಟ್ ಕಾಲೇಜುಗಳಲ್ಲಿ ಕೆಲವು ಸೀಟುಗಳನ್ನು ಸರ್ಕಾ ರದವರು ಇಟ್ಟುಕೊಂಡಿದ್ದಾರೆ, ಜನರಲ್ ಪೂಲ್‌ಗೆ ಇಟ್ಟುಕೊಳ್ಳುವ ಬದಲಾಗಿ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಯಾವರೀತಿ ಅಡ್ಮಿಷನ್ ಮಾಡುತ್ತಾರೋ ಅದೇರೀತಿ ಪ್ರೈವೇಟ್ ಕಾಲೇಜ್‌ನಲ್ಲೂ ಕೂಡ ಆಯ್ಕೆ ಮಾಡಬೇಕೆಂದು ರೂಲ್ಸ್ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಈ ವಿಷಯ ಅವರಿಗೆ ಸಂಬಂಧಪಟ್ಟದ್ದು. ಅದುದರಿಂದ ಅದನ್ನು ನಾವು ಮಾಡುವುದಕ್ಕಾಗುವುದಿಲ್ಲ.